ವಿಷಯ: ಬೆಂಗಳೂರು ನಗರ ಜಿಲ್ಲೆಯ ಶಾಲೆಗಳ ವೇಳೆಯನ್ನು ಪರಿಷ್ಕರಿಸುವ ಬಗ್ಗೆ (ಆನೇಕಲ್ ತಾಲ್ಲೂಕನ್ನು ಹೊರತುಪಡಿಸಿ)

ಓದಲಾಗಿದೆ: (1) ದಿ. 28.4.2000ರ ಅಧಿಕೃತ ಜ್ಞಾಪನ ಸಂಖ್ಯೆ ಇಡಿ 67 ಪಿಎಂಎ 2000

(2) ದಿ. 22.6.2000ರ ಅಧಿಸೂಚನೆ ಸಂಖ್ಯೆ ಇಡಿ 67 ಪಿಎಂಎ 2000

(3) ದಿ. 6.7.2000ರ ಅಧಿಕೃತ ಜ್ಞಾಪನ ಸಂಖ್ಯೆ ಇಡಿ 67 ಪಿಎಂಎ 2000

(4) ದಿ. 25.4.2005ರ ಅಧಿಕೃತ ಜ್ಞಾಪನ ಸಂಖ್ಯೆ ಇಡಿ 52 ಪಿಎಂಎ 2005

(5) ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿ: 17.03.2008 ರಂದು ನಡೆದ ಸಭೆಯ ನಡವಳಿ.

(6) ಕಾರ್ಯಕಾರಿ ಸಮಿತಿ ಟಿಪ್ಪಣಿ ಸಂಖ್ಯೆ: ECC 138/2008, ದಿ: 04.04.2008

* * * *

ಪ್ರಸ್ತಾವನೆ :-

ಮೇಲೆ ಓದಲಾದ (1) ರ ದಿ. 28.4.2000 ರ ಸರ್ಕಾರದ ಅಧಿಕೃತ ಜ್ಞಾಪನ ಆದೇಶದಲ್ಲಿ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳು ಬೆಳಿಗ್ಗೆ 9.00 ಗಂಟೆಗೆ ಮತ್ತು ಅದಕ್ಕೂ ಮುಂಚಿತವಾಗಿ ಪ್ರಾರಂಭಿಸಬೇಕೆಂದು ಹಾಗೂ ಪ್ರತಿದಿನ 5.30 ಗಂಟೆ ಕಲಿಕಾವಧಿ ಇರಬೇಕೆಂಬ ಸೂಚನೆಗಳನ್ನು ನಿಗಧಿಪಡಿಸಲಾಗಿತ್ತು.

2. ನಂತರ, ಮೇಲೆ ಓದಲಾದ (2) ರ ದಿ. 22.6.2000 ರ ಸರ್ಕಾರದ ಅಧಿಸೂಚನೆಯನ್ವಯ ಮೇಲ್ಕಂಡ ವೇಳೆಯನ್ನು ಬದಲಾಯಿಸಿ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳನ್ನು ಬೆಳಿಗ್ಗೆ 9.30 ಗಂಟೆಗೆ ಮತ್ತು ಅದಕ್ಕೂ ಮುಂಚೆ ಪ್ರಾರಂಭಿಸಲು ಆದೇಶಿಸಿ ಮಾರ್ಪಾಟು ಆದೇಶ ಹೊರಡಿಸಲಾಗಿತ್ತು.

3. ತರುವಾಯ, ಮೇಲೆ ಓದಲಾದ (3) ರ ದಿ. 6.7.2000ರ ಅಧಿಕೃತ ಜ್ಞಾಪನ ಆದೇಶದನ್ವಯ ಶಾಲೆಗಳನ್ನು ಪ್ರಾರಂಭಿಸುವ ವೇಳೆಯು ಸೇರಿದಂತೆ ಶಾಲೆಗಳ ವೇಳೆಯನ್ನು ನಿಗದಿಪಡಿಸುವ ಅಧಿಕಾರವನ್ನು ಸ್ಥಳೀಯ ಪರಿಸ್ಥಿತಿ ಹಾಗೂ ಮಕ್ಕಳ ಅನುಕೂಲವನ್ನು ಗಣನೆಗೆ ತೆಗೆದುಕೊಂಡು ಶಾಲೆಗಳ ವೇಳೆಯನ್ನು ನಿಗದಿಪಡಿಸಲು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಅಧಿಕಾರವನ್ನು ನೀಡಲಾಯಿತು. ಅದರಂತೆ, ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಪಂಚಾಯತ್ ಕಾರ್ಯಾಲಯ ನಿಗಧಿಪಡಿಸುವ ವೇಳೆಯಂತೆ ಆಯಾ ಜಿಲ್ಲೆಗಳಲ್ಲಿನ ಶಾಲೆಗಳು ನಡೆಯುತ್ತಿವೆ.

4. ಮುಂದುವರೆದು, ಮೇಲೆ ಓದಲಾದ (4) ರ ದಿ. 25.4.2005 ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ, ಬೆಂಗಳೂರು ನಗರದಲ್ಲಿನ ಸಂಚಾರ ದಟ್ಟಣೆಯನ್ನು ಕಡಿಮೆಗೊಳಿಸುವ ನಿಟ್ಟಿನಿಂದ ಸಿಬಿಎಸ್‌ಇ/ಸಿಐಎಸ್‌ಸಿಇ ಶಾಲೆಗಳು ಹಾಗೂ ರಾಜ್ಯದ ಪಠ್ಯಕ್ರಮವನ್ನು ಅಳವಡಿಸಿಕೊಂಡಿರುವ ಎಲ್ಲಾ ಇಂಗ್ಲೀಷ್ ಮಾಧ್ಯಮ ಶಾಲೆಗಳು 2005-06ನೇ ಶೈಕ್ಷಣಿಕ ವರ್ಷದಿಂದ ಬೆಂಗಳೂರು ನಗರದಲ್ಲಿ ಬೆಳಿಗ್ಗೆ 8.30 ಮತ್ತು ಅದಕ್ಕೂ ಮುಂಚಿತವಾಗಿ ಪ್ರಾರಂಭಿಸಲು ಸೂಚನೆಗಳನ್ನು ಹೊರಡಿಸಲಾಗಿದೆ. ಅದರಂತೆ, ಬಹುತೇಕ ಸಿಬಿಎಸ್‌ಇ/ಸಿಐಎಸ್‌ಸಿಇ ಶಾಲೆಗಳು ಬೆಳಿಗ್ಗೆ 8.30 ಮತ್ತು ಅದಕ್ಕೂ ಮುಂಚಿತವಾಗಿ ಪ್ರಾರಂಭವಾಗಿ ಬೆಂಗಳೂರು ನಗರದಲ್ಲಿ ನಡೆಯುತ್ತಿವೆ.

5. ಇಲಾಖಾ ಮುಖ್ಯಸ್ಥರು, ಒಳಾಡಳಿತ ಇಲಾಖೆಯ ಸಂಚಾರ ವಿಭಾಗದ ಸಂಬಂಧಪಟ್ಟ ಅಧಿಕಾರಿಗಳು, ಶಿಕ್ಷಕರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಒಳಗೊಂಡಂತೆ ಸರ್ಕಾರದ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿ: 17.03.2008 ರಂದು ನಡೆದ ಸಭೆಯಲ್ಲಿ ಸುಧೀರ್ಘ ಚರ್ಚೆಯ ನಂತರ ಬೆಂಗಳೂರು ನಗರ ಜಿಲ್ಲೆಯ ಮಕ್ಕಳು ಶಾಲೆಗಳಿಗೆ ತೆರಳುವ ಸಂದರ್ಭದಲ್ಲಿ ರಸ್ತೆಯನ್ನು ದಾಟುವಾಗ ಅವರ ಸುರಕ್ಷತೆಯನ್ನು ಕಾಪಾಡುವ ಮತ್ತು ಸಂಚಾರದ ದಟ್ಟಣೆಯನ್ನು ಪೀಕ್ ಸಮಯದಲ್ಲಿ ಕಡಿಮೆಗೊಳಿಸುವ ದೃಷ್ಟಿಯಿಂದ ಬೆಂಗಳೂರು ನಗರ ಜಿಲ್ಲೆಯ (ಆನೇಕಲ್ ತಾಲ್ಲೂಕನ್ನು ಹೊರತುಪಡಿಸಿ) ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಬೆಳಿಗ್ಗೆ 9.00 ಗಂಟೆಗೆ ಮತ್ತು ಎಲ್ಲಾ ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಬೆಳಿಗ್ಗೆ 8.30 ಗಂಟೆಗೆ ಮುಂಬರುವ 2008-09ನೇ ಶೈಕ್ಷಣಿಕ ವರ್ಷದಿಂದ ನಿಗಧಿಪಡಿಸಿ ಪ್ರಾರಂಭಿಸಲು ಅನುಮತಿ ಕೋರಿ ಕಾರ್ಯಕಾರಿ ಸಮಿತಿಗೆ ನಿವೇದನೆ ಟಿಪ್ಪಣಿ ಸಲ್ಲಿಸಲು ತೀರ್ಮಾನಿಸಲಾಯಿತು.

6. ಕಾರ್ಯಕಾರಿ ಸಮಿತಿಯು ದಿ: 04.04.2008 ರಂದು ನಡೆದ ಸಭೆಯಲ್ಲಿ ಶಿಕ್ಷಣ ಇಲಾಖೆಯ ಈ ಪ್ರಸ್ತಾವನೆಗೆ ಅನುಮೋದನೆ ನೀಡಿದೆ. ಅದರಂತೆ, ಸರ್ಕಾರಿ ಹಾಗೂ ಅನುದಾನಿತ/ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ವೇಳೆಯನ್ನು ಮರು ನಿಗಧಿಪಡಿಸಲು ತೀರ್ಮಾನಿಸಲಾಗಿದೆ. ಅದರಂತೆ, ಈ ಆದೇಶ

<u>*ಸರ್ಕಾರದ ಆದೇಶ ಸಂಖ್ಯೆ: ಇಡಿ 58 ಪಿಬಿಎಸ್ 2008*</u>

<u>*ಬೆಂಗಳೂರು, ದಿನಾಂಕ : 23.04.2008*</u>

7. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2008-09 ನೇ ಶೈಕ್ಷಣಿಕ ವರ್ಷದಿಂದ ಬೆಂಗಳೂರು ನಗರ ಜಿಲ್ಲೆಯ (ಆನೇಕಲ್ ತಾಲ್ಲೂಕನ್ನು ಹೊರತುಪಡಿಸಿ), ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಬೆಳಿಗ್ಗೆ 9.00 ಗಂಟೆಗೆ ಮತ್ತು ಎಲ್ಲಾ ಖಾಸಗಿ ಅನುದಾನ/ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಬೆಳಿಗ್ಗೆ 8.30 ಗಂಟೆಗೆ ಅಥವಾ ಅದರೊಳಗೆ ಪ್ರಾರಂಭಿಸುವಂತೆ ಶಾಲಾ ವೇಳೆಯನ್ನು ಪರಿಷ್ಕರಿಸಿ ಮರುನಿಗದಿಪಡಿಸಿ ಆದೇಶಿಸಿದೆ.

8. ಸದರಿ ಆದೇಶದ ಪಾಲನೆ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಸಹಾಯಕ ಶಿಕ್ಷಣಾಧಿಕಾರಿಗಳೂ ನಿಗಾವಹಿಸತಕ್ಕದ್ದು.

ಭಾರತದ ರಾಷ್ಟ್ರಪತಿಗಳ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಎಂ. ನಂದಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಶಿಕ್ಷಣ ಇಲಾಖೆ

ಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ವಾರದ ಗೆಜೆಟ್‌ನಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಶಿಕ್ಷಣ ಇಲಾಖೆಯ ಪ್ರಾಥಮಿಕ ಶಿಕ್ಷಣ–ಬಿ ಶಾಖೆಗೆ ಕಳುಹಿಸುವುದು.

ಪ್ರತಿಯನ್ನು:

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಧಾರವಾಡ/ಗುಲ್ಬರ್ಗಾ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ನಿರ್ದೇಶಕರು (ಪ್ರಾಥಮಿಕ/(ಪ್ರೌಢ/ಉರ್ದು ಮತ್ತು ಭಾಷಾ ಅಲ್ಪಸಂಖ್ಯಾತ ಶಾಲೆಗಳು) ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ
5. ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
6. ರಾಜ್ಯದ ಎಲ್ಲಾ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ
7. ಶ್ರೀ ಎನ್. ಜಯಪಾಲ್, ವಿಭಾಗೀಯ ಟ್ರಾಫಿಕ್ ಮ್ಯಾನೇಜರ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಡಬಲ್ ರೋಡ್, ಶಾಂತಿ ನಗರ, ಬೆಂಗಳೂರು
8. ಶ್ರೀ ಕೆ. ಈಶ್ವರ್ ಪ್ರಸಾದ್, ಎ.ಸಿ.ಪಿ. ಸಂಚಾರ, ಕೇಂದ್ರ ಉಪವಿಭಾಗ, ಬೆಂಗಳೂರು
9. ಶ್ರೀ ನವೀನ್, ಡಿವಿಜನಲ್ ಟ್ರಾಫಿಕ್ ಆಫೀಸರ್, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ.
10. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ (ಜಿಲ್ಲಾ ಉ. ನಿರ್ದೇಶಕರ ಮುಖಾಂತರ)
11. ಸರ್ಕಾರದ ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ
12. ಶಿಕ್ಷಣ ಇಲಾಖೆಯ ಎಲ್ಲಾ ಶಾಖಾಧಿಕಾರಿಗಳಿಗೆ
13. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

so_(prib)